ದಿಃ 19-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿಯರ ಪರ ವಕೀಲರಾದ ಶ್ರೀ ಎ.ಎ.ಪಿ. ರವರಿಂದಃ-**

**14.** ಯಲ್ಲವ್ವನ ಗಂಡನಾದ ಬಸಪ್ಪ ರವರ ಮರಣ ಉತಾರವನ್ನು ಪಡೆಯಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ, ಮುಂದುವರೆದು ಸದರಿ ವ್ಯಕ್ತಿಯು ಯಾವಾಗ ಮತ್ತು ಎಲ್ಲಿ ಮೃತಾಗಿರುತ್ತಾರೆ ಎಂದು ಗೊತ್ತಿರುವುದಿಲ್ಲ ಹಾಗೂ ನಮಗೆ ಆ ವ್ಯಕ್ತಿಯು ಸಂಬಂಧಪಡುವುದಿಲ್ಲ ಎಂದು ನುಡಿಯುತ್ತಾರೆ. ಯಲ್ಲವ್ವ ರವರು ಯಾವಾಗ ಮರಣ ಹೊಂದಿರುತ್ತಾರೆ ಎಂದು ಚೌಕಾಸಿ ಮಾಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಯಲ್ಲವ್ವ ಮತ್ತು ಬಸಪ್ಪ ರವರು ಮೃತರಾಗಿರುತ್ತಾರೆ ಎಂದು 1 ರಿಂದ 3 ನೇ ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗಿ ನ್ಯಾಯಾಲಯದಿಂದ ಆದೇಶದಿಂದ ಅವರ ಮರಣ ಉತಾರುಗಳನ್ನು ಪಡೆದಿರುತ್ತಾರೆ ಎಂದರೆ ಸುಳ್ಳು. ಯಲ್ಲವ್ವ ಮತ್ತು ಬಸಪ್ಪ ರವರ ಮರಣ ದಾಖಲೆಯಲ್ಲಿ ಅವರ ಮರಣದ ದಿನಾಂಕವನ್ನು ತೋರಿಸಿರುವುದು ಸರಿಯಾಗಿರುತ್ತದೆ. ಬಸಪ್ಪ ರವರ ಮರಣ ದಾಖಲೆಯಲ್ಲಿ ತೋರಿಸಿರುವ ಮರಣದ ದಿನಾಂಕ ಸರಿಯಾಗಿರುತ್ತದೆ. ಅದೇ ರೀತಿ 1 ರಿಂದ 3 ನೇ ಪ್ರತಿವಾದಿಯರ ಅಜ್ಜನಾದ ಬಾಳಪ್ಪ ರವರ ಮರಣ ದಾಖಲೆಯನ್ನು ನ್ಯಾಯಾಲಯದ ಆದೇಶದ ಮೇರೆಗೆ ಪಡೆದಿರುವ ಅವರ ಮರಣದ ದಿನಾಂಕ ಸರಿಯಾಗಿರುತ್ತದೆಯೇ ಎಂದರೆ ಸರಿ. ಸದರಿಯವರ ಮರಣ ದಾಖಲೆಗಳು ನ್ಯಾಯಾಲಯದ ಆದೇಶದ ಮೇರೆಗೆ ಪಡೆಯಲಾಗಿದೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

**15.** ಬಾಳಪ್ಪ ರವರ ಮರಣ ದಾಖಲೆಯಲ್ಲಿ ಪಿರಗಣ್ಣವರ್ ಅಲಿಯಾಸ್ ಹೊಲೆಯರ್ ಎಂದು ನಮೂದಿಸಿರುವುದು ಸರಿಯೇ ಎಂದರೆ ಸಾಕ್ಷಿಯು ತಪ್ಪು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ನ್ಯಾಯಾಲಯಕ್ಕೆ ಸದರಿಯವರ ಮರಣ ಉತಾರವನ್ನು ಪಡೆಯುವ ಸಲುವಾಗಿ ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಗಳಲ್ಲಿ ಪಿರಗಣ್ಣವರ್ ಅಲಿಯಾಸ್ ಹೊಲೆಯರ್ ಎಂದು ನಮೂದಿಸಲಾಗಿತ್ತು ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿಯವರ ಮರಣ ದಾಖಲೆಗೆ ಸಂಬಂಧಪಟ್ಟಂತೆ ನ್ಯಾಯಾಲಯವು ಮಾಡಿದ ಸದರಿ ಅರ್ಜಿಗಳ ಮೇಲಿನ ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಯಲ್ಲವ್ವ ಮತ್ತು ಬಸಪ್ಪ ರವರು ಮೃತರಾದ ನಂತರ 1 ರಿಂದ 3 ನೇ ಪ್ರತಿವಾದಿಯರು ವಾರಸಾ ಪ್ರಮಾಣ ಪತ್ರಕ್ಕೆ ಅರ್ಜಿ ಸಲ್ಲಿಸಿದ್ದರು ಎಂದರೆ ಸಾಕ್ಷಿಯು ತಪ್ಪು ಎಂದು ನುಡಿಯುತ್ತಾರೆ. 1 ರಿಂದ 3 ನೇ ಪ್ರತಿವಾದಿಯರು ವಾರಸಾ ಪಡೆಯಲು ನೀಡಿದ ಅರ್ಜಿಯು ತಪ್ಪಾಗಿರುತ್ತದೆ. ಬಸಪ್ಪ ಮತ್ತು ಬಾಳಪ್ಪ ಖಾಸಾ ಅಣ್ಣ ತಮ್ಮಂದಿರು ಎಂದರೆ ಸಾಕ್ಷಿಯು ತಪ್ಪು ಇರುತ್ತದೆ ಎಂದು ನುಡಿಯುತ್ತಾರೆ. ಯಲ್ಲವ್ವ ಮತ್ತು ಬಸಪ್ಪ ರವರು ತೀರಿಕೊಂಡ ನಂತರ ಪ್ರತಿವಾದಿಯರ ತಂದೆ ಬರ್ಮಪ್ಪ, ಬಾಳಪ್ಪ ಮತ್ತು ಚಂದ್ರವ್ವ ರವರ ಹೆಸರಿನಲ್ಲಿ ವಾರಸಾ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಪ್ರತಿವಾದಿಯರ ತಂದೆ ಬರ್ಮಪ್ಪ, ಬಾಳಪ್ಪ ಮತ್ತು ಚಂದ್ರವ್ವ ರವರು ಯಲ್ಲವ್ವ ರವರ ವಾರಸುದಾರರು ಅಲ್ಲ ಎಂದು ನುಡಿಯುತ್ತಾರೆ. ಯಲ್ಲವ್ವ ಮತ್ತು ಬಸಪ್ಪ, ಪ್ರತಿವಾದಿಯರ ಅಜ್ಜನಾದ ಬಾಳಪ್ಪ ಮತ್ತು ಪ್ರತಿವಾದಿಯರ ತಂದೆಯವರಾದ ಬರ್ಮಪ್ಪ ರವರು ಒಂದೇ ಕುಟುಂಬದವರು ಎಂದರೆ ಸರಿಯಲ್ಲ.

**16.** 1 ರಿಂದ 3 ನೇ ಪ್ರತಿವಾದಿಯರಿಗೂ ಮತ್ತು ಅವರ ತಂದೆಯಾದ ಬರ್ಮಪ್ಪನಿಗೂ ಹಾಗೂ ಅವರ ಅಜ್ಜನಾದ ಬಾಳಪ್ಪ ರವರಿಗೂ ಪಿರಗಣ್ಣವರ್ ಮತ್ತು ಹೊಲೆಯರ್ ಎಂದು ಎರಡೂ ಹೆಸರಿನಿಂದ ಕರೆಯುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಹೊಡೆದುಕೊಳ್ಳುವ ಉದ್ದೇಶದಿಂದ 1 ರಿಂದ 3 ನೇ ಪ್ರತಿವಾದಿಯರಿಗೂ ಹಾಗೂ ಯಲ್ಲಪ್ಪ ಮತ್ತು ಬಾಳಪ್ಪ ರವರಿಗೂ ಸಂಬಂಧವಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರ ವಾರಸಾ ಪ್ರಮಾಣ ಪತ್ರವನ್ನು ಪಡೆದ ನಂತರ ಮ್ಯುಟೇಷನ್ ದಾಖಲೆಗಳಲ್ಲಿ 1 ರಿಂದ 3 ನೇ ಪ್ರತಿವಾದಿಯರ ಹೆಸರು ನೊಂದಾಯಿಸಿಕೊಂಡಿರುವುದು ಗೊತ್ತಾದ ನಂತರ ಉಪ ವಿಭಾಗಾಧಿಕಾರಿಯವರ ಮುಂದೆ ನಾನು ಆರ್.ಟಿ.ಎಸ್. ಪ್ರಕರಣವನ್ನು ದಾಖಲಿಸಿದ್ದೆ ಎಂದರೆ ಸರಿ. ಪ್ರಸ್ತುತ ದಾವೆಯನ್ನು ದಾಖಲಿಸಿದ ನಂತರ ಉಪ ವಿಭಾಗಾಧಿಕಾರಿಯವರ ಮುಂದೆ ಸಲ್ಲಿಸಿದ ಪ್ರಕರಣವನ್ನು ದಾಖಲಿಸಲಾಯಿತು ಎಂದರೆ ಸಾಕ್ಷಿಯು ನ್ಯಾಯಾಲಯದ ದಾವೆ ಹಾಗೂ ಆರ್.ಟಿ.ಎಸ್ ಪ್ರಕರಣ ಒಂದೇ ಸಮಯಕ್ಕೆ ದಾಖಲಾಗಿರುವುದಾಗಿ ನುಡಿಯುತ್ತಾರೆ. 1 ರಿಂದ 3 ನೇ ಪ್ರತಿವಾದಿಯರು ಮತ್ತು ಬರ್ಮಪ್ಪ ರವರು ಯಲ್ಲವ್ವ ರವರ ವಾರಸುದಾರರು ಎಂದು ತಿಳಿದಿದ್ದರೂ ನಾನು ಅವರ ಹೆಸರುಗಳು

ತಪ್ಪಾಗಿವೆ ಎಂದು ದಾವೆ ಹಾಗೂ ಆರ್.ಟಿ.ಎಸ್. ಪ್ರಕರಣಗಳನ್ನು ದಾಖಲಿಸಿದ್ದೆ ಎಂದರೆ ಸರಿಯಲ್ಲ.

**17.** ನಾವು ಜಮೀನನ್ನು ಯಲ್ಲವ್ವ ರವರು ತೀರಿಕೊಳ್ಳುವ ಪೂರ್ವದಲ್ಲಿ ಅವರಿಗೆ ಖಂಡ್ (ಲಾವಣಿ) ಕೊಟ್ಟು ಮಾಡುತ್ತಿದ್ದೆವು. ನಮ್ಮ ತಂದೆಯವರು 1962 ರಂದು ಮೃತಾಗಿರುತ್ತಾರೆ. ಆ ಕಾರಣ ನನಗೆ ನಮ್ಮ ತಂದೆಯವರು ಎಷ್ಟು ಲಾವಣಿ ಕೊಡುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಆಗ 10 ವರ್ಷದವನಿದ್ದೆ ಎಂದು ನುಡಿಯುತ್ತಾರೆ. ನಮ್ಮ ತಂದೆಯವರು ಲಾವಣಿ ಕೊಡುತ್ತಿದ್ದರು ಎನ್ನುವುದಕ್ಕೆ ಯಾವುದೇ ಪುರಾವೆ ಇಲ್ಲ . ಯಲ್ಲವ್ವರವರು ನಮ್ಮ ತಂದೆಯವರ ಪೂರ್ವದಲ್ಲಿ ಮೃತರಾದ ನಂತರ ಲಾವಣಿಯನ್ನು ಯಲ್ಲವ್ವ ರವರ ವಾರಸುದಾರರು ಯಾರೂ ಇಲ್ಲದ ಕಾರಣ ನಾವು ಲಾವಣಿಯನ್ನು ಕೊಟ್ಟಿರುವುದಿಲ್ಲ. ನಾವು ಲಾವಣಿ ಯಾರಗೂ ಕೊಟ್ಟಿರುವುದಿಲ್ಲ, ನಮ್ಮ ಕಬ್ಜೆಯಲ್ಲಿ ದಾವಾ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ . ನಮ್ಮ ಹೆಸರು ದಾಖಲೆಗಳಲ್ಲಿ ನೊಂದಾಗಿರುವುದು ಪೋಕಳ್ ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ಸಂರಕ್ಷಿತ ಕೂಳ್ (ರೈತಾಪಿ) ಎಂದು ದಾಖಲಾಗಿರುತ್ತದೆ ಎಂದು ನುಡಿಯುತ್ತಾರೆ. ಕರ್ನಾಟಕ ಭೂಸುಧಾರಣೆ ಕಾಯ್ದೆ ಜಾರಿಗೆ ಬಂದ ನಂತರ ನಮಗೆ ಯಾವುದೇ ರೀತಿಯ ಹಕ್ಕು ಪ್ರಾಪ್ತವಾಗಿರುವುದಿಲ್ಲ ಎಂದರೆ ಸರಿಯಲ್ಲ.

**18.** ಈಗ ಆಸ್ತಿಗಳ ಮೌಲ್ಯ ಜಾಸ್ತಿಯಾಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಮೌಲ್ಯ ಎಷ್ಟು ಆಗಬಹುದು ಎಂದರೆ ಸಾಕ್ಷಿಯು ನಾನು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ನಾವು ಆಸ್ತಿಯನ್ನು ಮಾರಾಟ ಮಾಡಬೇಕೆಂದು ಸುಂಟಕರ್ ರವರಿಗೆ ಪ್ರಯತ್ನಿಸಿದ್ದೆವು ಎಂದರೆ ಸರಿಯಲ್ಲ. ಸಂಟಕರ್ ರವರು ಕಣಬರ್ಗಿ ಗ್ರಾಮದವರು ಎಂದರೆ ಸರಿ. ದಾವಾ ಆಸ್ತಿಗೆ ಹೊಂದಿಕೊಂಡು ಸುಂಟಕರ್ ರವರು ತಮ್ಮ ಜಮೀನಿನಲ್ಲಿ ಡೆವಲಪ್ ಮೆಂಟ್ ಮಾಡುತ್ತಿದ್ದರು ಎಂದರೆ ಸರಿ. ಸುಂಟಕರ್ ರವರು ದಾವಾ ಆಸ್ತಿಯ ಪಕ್ಕದಲ್ಲಿ ಜಮೀನನ್ನು ಡೆವಲಪ್ ಮೆಂಟ್ ಮಾಡುತ್ತಿದ್ದರಿಂದ ನಾವು ಅವರ ಹತ್ತಿರ ಹೋಗಿ 60,00,000/- ರೂಗಳಿಗೆ ಮಾರಾಟ ಮಾಡುತ್ತೇವೆಂದು ಕೇಳಿರುತ್ತೀರಿ ಎಂದರೆ ಸರಿಯಲ್ಲ. ಇದರ ಸಂಬಂಧವಾಗಿ ಸುಂಟಕರ್ ರವರು ನನ್ನನ್ನು ಹಾಗೂ ಪ್ರತಿವಾದಿಯರನ್ನು ಕರೆಯಿಸಿ ಮಾರಾಟದ ವಿಚಾರವಾಗಿ ಸೇರಿದ್ದರು ಎಂದರೆ ಸಾಕ್ಷಿಯು ಸೇರಿರಬಹುದು, ನ್ಯಾಯಾಲಯದಲ್ಲಿ

ಪ್ರಕರಣ ಇರುವುದರಿಂದ ನಾವು ಮಾರಾಟ ಮಾಡುವುದಿಲ್ಲ ಎಂದು ಹೇಳಿದೆವು ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ರೀತಿಯ ಹಕ್ಕು ಇಲ್ಲದೆ ಇದ್ದರೂ ಪ್ರತಿವಾದಿಗಳಿಂದ ಹಣ ಹೊಡೆಯಬೇಕೆಂಬ ಉದ್ದೇಶದಿಂದ ಪ್ರತಿವಾದಿಯರ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**